ಪ್ರಜಾವಾಣಿ

## ಬಿಇಟಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಅನ್ವೇಷಣಾ – 26

# ‘ಅಧ್ಯಯನದೊಂದಿಗೆ ಅನ್ವೇಷಣೆ ಅಗತ್ಯ’

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ‘ಅಧ್ಯಯನದೊಂದಿಗೆ ಹೊಸ ಯುಗದ ಆಗು-ಹೋಗುಗಳಿಗೆ ಹೊಂದಿಕೊಂಡು ಸತತವಾಗಿ ಅನ್ವೇಷಣೆ ಕೈಗೊಳ್ಳುವುದು ಅತ್ಯಗತ್ಯವಾಗಿದೆ’ ಎಂದು ಬಿಇಟಿ ಎಂಜಿನಿಯರಿಂಗ್ ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ದಿಲೀಪಕುಮಾರ ತಾಳಂಪಳ್ಳಿ ಹೇಳಿದರು.

ನಗರದ ಬಿಇಟಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಈಚೆಗೆ ಹಮ್ಮಿಕೊಂಡಿದ್ದ ವಾರ್ಷಿಕೋತ್ಸವ ಹಾಗೂ ಅನ್ವೇಷಣಾ-26 ಕಾರ್ಯಕ್ರಮದ ಉದ್ಘಾಟನೆಯಲ್ಲಿ ಅವರು ಮಾತನಾಡಿದರು.

‘ಜ್ಞಾನ, ವಿಜ್ಞಾನ, ತಂತ್ರಜ್ಞಾನದ ಕ್ಷೇತ್ರದಲ್ಲಿ ನವನೂತನ ಸಂಶೋಧನೆಗಳು ಆಗುತ್ತಿವೆ. ಯಾರೂ ಹಿಂದೆ ಬೀಳುವುದು ಸರಿಯಲ್ಲ. ಸಂಶೋಧನಾ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ದತೆ ಕೈಗೊಳ್ಳಬೇಕು. ಉನ್ನತ ಹುದ್ದೆಗಳನ್ನು ಅಲಂಕರಿಸಿ ದೇಶದ ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳಬೇಕು. ಸಂಸ್ಕಾರವಂತ ರಾಗಬೇಕು. ಸಂಸ್ಕೃತಿಯನ್ನು ಸಂರಕ್ಷಿಸಬೇಕು’ ಎಂದರು.




ಬಸವಕಲ್ಯಾಣದ ಬಿಇಟಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಈಚೆಗೆ ನಡೆದ ಅನ್ವೇಷಣಾ – 26 ಕಾರ್ಯಕ್ರಮವನ್ನು ದಿಲೀಪಕುಮಾರ ತಾಳಂಪಳ್ಳಿ ಉದ್ಘಾಟಿಸಿದರು. ಗಿರೀಶ ಶಿವಣ್ಣ, ಮಲ್ಲಮ್ಮ ತಾಳಂಪಳ್ಳಿ, ಅಶೋಕಕುಮಾರ ವಣಗೇರಿ ಪಾಲ್ಗೊಂಡಿದ್ದರು

ಬೆಂಗಳೂರಿನ ಖಾಸಗಿ ಕಂಪನಿಯೊಂದರ ಸಿಇಒ ಗಿರೀಶ ಶಿವಣ್ಣ ಮಾತನಾಡಿ, ‘ಕೌಟುಂಬಿಕ ಉನ್ನತಿ ಹಾಗೂ ನಾಡ ಸೇವೆಯಲ್ಲಿ ಎಲ್ಲರೂ ತೊಡಗಿಸಿಕೊಳ್ಳಬೇಕು. ನಮ್ಮ ಕಂಪನಿಯಲ್ಲಿ ಪ್ರತಿವರ್ಷ ಲಕ್ಷಾಂತರ ಯುವಕರು ತರಬೆತಿ ಪಡೆದು ಉದ್ಯೋಗದಲ್ಲಿದ್ದಾರೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ವಿಫುಲ ಅವಕಾಶಗಳಿದ್ದು ಅದಕ್ಕಾಗಿ ತಕ್ಕ ಸಿದ್ಧತೆ ಮಾಡಿಕೊಳ್ಳಬೇಕು’ ಎಂದರು.

ಕಾಲೇಜಿನ ಪ್ರಾಚಾರ್ಯ ಅಶೋಕಕುಮಾರ ವಣಗೇರಿ ಮಾತನಾಡಿ, ‘ಕಾಲೇಜು ಗ್ರಾಮೀಣ ಭಾಗದಲ್ಲಿದ್ದು ಅನೇಕ ಕಷ್ಟ ನಷ್ಟಗಳು ಎದುರಾದರೂ ಪ್ರಗತಿ ಪಥದಲ್ಲಿ ಸಾಗುತ್ತಿದೆ. ಬಡತನ ಹಾಗೂ ಇತರೆ ತೊಂದರೆಗಳ ಕಾರಣ ಮಹಾನಗರಗಳಿಗೆ ಹೋಗಿ ಶಿಕ್ಷಣ ಪಡೆಯುವುದಕ್ಕೆ ಸಾಧ್ಯ ಇಲ್ಲದವರಿಗೆ ವಿದ್ಯೆ ನೀಡುತ್ತಿದೆ. ನುರಿತ ಸಿಬ್ಬಂದಿ, ಉತ್ತಮ ಕಟ್ಟಡ, ವಿವಿಧ ಸೌಲಭ್ಯಗಳ ವ್ಯವಸ್ಥೆಯೂ ಇದೆ. ಬೇಡಿಕೆ ಇರುವಂಥ ಹೊಸ ಹೊಸ ಕೋರ್ಸ್‌ಗಳ ಅಧ್ಯಯನಕ್ಕೆ ಅನುಕೂಲತೆ ಒದಗಿಸಲಾಗಿದೆ’ ಎಂದರು.

ಕಾಲೇಜು ಆಡಳಿತ ಮಂಡಳಿ ಸದಸ್ಯೆ ಮಲ್ಲಮ್ಮ ತಾಳಂಪಳ್ಳಿ, ಬಿಇಡಿ ಕಾಲೇಜಿನ ಪ್ರಾಚಾರ್ಯ ನಾಗಯ್ಯ ಸ್ವಾಮಿ, ಉಪನ್ಯಾಸಕ ವಿದ್ಯಾಸಾಗರ ಮೂಲಗೆ ಮಾತನಾಡಿದರು. ಕುಲಸಚಿವ ಪ್ರೇಮಸಾಗರ ಪಾಟೀಲ, ಬೋಧಕ ಸಿಬ್ಬಂದಿಯವರಾದ ಅರುಣಕುಮಾರ ಯಲಾಲ್, ವಿಶ್ವನಾಥ ಸ್ವಾಮಿ, ಎನ್.ಆರ್.ಕೊಡ್ಲೆ, ಶಿವಕುಮಾರ ಸ್ವಾಮಿ, ಸುವರ್ಣಲತಾ, ಸಂಜೀವಕುಮಾರ ಜಲ್ದೆ, ಅನಿಲ ಪಾಟೀಲ, ಗುರುರಾಜ, ಖಂಡೋಬಾ, ವೃಷಿಕೇತ ಭೂಸಾರೆ, ಸುದರ್ಶನ ಮೇತೆ, ವಿದ್ಯಾಸಾಗರ ಉಪಸ್ಥಿತರಿದ್ದರು. ಬಳಿಕ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.